ಕಂದಾಯ ಇಲಾಖೆಯ ಅಗತ್ಯತೆಯನ್ನು ಗಣನೀಕರಿಸುವುದು.

4177 (4181) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮೈಸೂರು ತಾಲ್ಲೂಕಿನ ಎಲ್ಲ ಕಂದಾಯದ ವಿವರಗಳು, ನೌಕರರ ಸೇವಾ ವಿವರಗಳು, ಭತ್ಯೆಗಳು ಹಾಗೂ ವೇತನ ಮುಂತಾದ ವಿಷಯಗಳನ್ನು ಗಣಕೀಕರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

2. ಹಾಗಿದ್ದಲ್ಲಿ ಈವರೆಗೆ ಆಗಿರುವ ಪ್ರಗತಿ ಎಷ್ಟು?

3. ಈ ಉದ್ದೇಶಕ್ಕೆ ಈವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

4. ಪೂರ್ಣ ಗಣಕೀಕರಿಸಲು ಆಗಬಹುದಾದ ವೆಚ್ಚವೆಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :—

1. ಹೌದು

2. ಮೈಸೂರು ತಾಲ್ಲೂಕಿನ ಎಲ್ಲ 164 ಗ್ರಾಮಗಳ 1996-97ನೇ ಸಾಲಿನ ಆರ್.ಟಿ.ಸಿ.ಗಳನ್ನು ಗಣಕೀಕರಿಸಲಾಗಿದ್ದು, ಪ್ರಸ್ತುತ ವರ್ಷದವರೆಗೆ ಉನ್ನತೀಕರಿಸಲಾಗುತ್ತಿದೆ. ನೌಕರರ ಸೇವಾ ವಿವರ, ವೇತನ ಬಿಲ್ಲು ಮುಂತಾದವುಗಳನ್ನು ಗಣಕೀಕರಿಸಲಾಗುತ್ತದೆ.

3. 7.97 ಲಕ್ಷ ರೂ.ಗಳು

4. 20.00 ಲಕ್ಷ ರೂ.ಗಳು

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯನಿರ್ವಹಣೆ.

4178(4188) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಎಷ್ಟು ಯೋಜನೆಗಳು ಜಾರಿಯಲ್ಲಿವೆ ಅವು ಯಾವುವು?

ಆ) ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸಾಕಷ್ಟು ಅನುದಾನ ಲಭ್ಯವಿದೆಯೆ;

ಇ) ಜನ ಸಂಖ್ಯೆಯ ಶೇ. 50ರಷ್ಟು ಇರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದತ್ತ ನ್ಯಾಯ ದೊರೆಯದಿರಲು ಕಾರಣಗಳೇನು?

ಈ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :—

ಆ) 39 ವಿವಿಧ ಯೋಜನೆಗಳು ಜಾರಿಯಲ್ಲಿವೆ. ಅನುಬಂಧ-1ರಲ್ಲಿ ನೀಡಿದೆ.

ಅ) ಇದೆ, 2000-2001 ನೇ ಸಾಲಿನಲ್ಲಿ 248.61 ಕೋಟಿ ರೂಗಳ ಅನುದಾನವನ್ನು ಒದಗಿಸಲಾಗಿದೆ.

ಇ) ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲದೆ, ಎಲ್ಲಾ ಅಭಿವೃದ್ಧಿ ಇಲಾಖೆಗಳ ಯೋಜನೆಗಳಲ್ಲಿ ಮಹಿಳೆಯರಿಗೆ ಶೇ. 30ರಷ್ಟು ಅನುದಾನವನ್ನು ಮೀಸಲಿಡಲಾಗಿದೆ.

ಈ) ಇಲಾಖಾ ಕಾರ್ಯಕ್ರಮಗಳಡಿ ಸಾಧಿಸಿದ ಪ್ರಗತಿಯನ್ನು ಪ್ರತಿ ತಿಂಗಳು ಎಂಎಂಆರ್ ಮತ್ತು ಕೆಡಿಪಿ ಸಭೆಗಳಲ್ಲಿ ಪರಿಶೀಲಿಸಲಾಗುತ್ತದೆ. ಹಾಗೂ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಿಬ್ಬಂದಿಗಳ ಜಾಬ್ ಚಾರ್ಟ್‌ಹಾಗೂ ತನಿಖೆನಡೆಸಲು ತಡೆಪಟ್ಟಿಯನ್ನು ತಯಾರಿಸಲಾಗಿದೆ. ಸುದ್ದಿ ಮಾಧ್ಯಮ ಮೂಲಕ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡಲಾಗುತ್ತಿದೆ.

2000-01ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು.

<u>ನಿರ್ದೇಶನ ಮತ್ತು ಆಡಳಿತ</u>

೧. ಸಿಬ್ಬಂದಿ ತರಬೇತಿ ಮತ್ತು ಸಂಶೋಧನೆ

<u>ಮಕ್ಕಳ ಕಲ್ಯಾಣ</u>

೨. ಅಂಗನವಾಡಿ ಕಾರ್ಯಕರ್ತೆಯರು ತರಬೇತಿಗಾಗಿ ಕೇಂದ್ರವಲಯ ಯೋಜನೆ ಕೇಂದ್ರ 100

೩. 5ನೇ ತರಗತಿಯಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿನಿಯರಿಗೆ ಹಾಜರಾತಿ ವಿದ್ಯಾರ್ಥಿವೇತನ

೪. ಕಷ್ಟಕರ ಪರಿಸ್ಥಿತಿಯಲ್ಲಿರುವ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮ

೫. ಬಾಲಕಾರ್ಮಿಕರ ಪುನರ್ವಸತಿ ಯೋಜನೆ

೬. ಬಾಲಸೇವಾ ಸಂಸ್ಥೆ ಮತ್ತು ಶಿಶು ಮಾರ್ಗದರ್ಶನ ಕೇಂದ್ರ

೭. ಮಕ್ಕಳ ದಿನಾಚರಣೆ ಹಾಗೂ ಶೌರ್ಯ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು

೮. ಅನಾಥ ಮಕ್ಕಳ ಫಾಸ್ಟರ್ ಕೇರ್ ಯೋಜನೆ

ಮಹಿಳಾ ಕಲ್ಯಾಣ

೯. ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು

೧೦. ಸಾರ್ವಜನಿಕ ಸಹಕಾರ ಮತ್ತು ಕುಟುಂಬ ಜೀವನ ಕಲ್ಯಾಣ

೧೧. ಬಾಲಕಿಯರಿಗಾಗಿ ವಸತಿ ನಿಲಯ

೧೨. ಸ್ವಶಕ್ತಿ- ತರಬೇತಿ ಹಾಗೂ ಉತ್ಪಾದನಾ ಘಟಕ

೧೩. ವೃತ್ತಿಪರ ಶಿಕ್ಷಣ ಪಡೆಯುವ ಮಹಿಳೆ ಮತ್ತು ಬಾಲಕಿಯರಿಗೆ ಧನ ಸಹಾಯ.

೧೪. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ತರಬೇತಿ ಮತ್ತು ಸಂಪರ್ಕ ನೆರವು

೧೫. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಿತ್ತೂರು ಚೆನ್ನಮ್ಮ ಪ್ರಶಸ್ತಿ

೧೬. ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಕ್ಷೇಮಾಭಿವೃದ್ಧಿ ನಿಧಿ

೧೭. ಕಾನೂನು ಪದವಿ ಪಡೆದ ಮಹಿಳೆಯರ ತರಬೇತಿಗೆ ಆರ್ಥಿಕ ನೆರವು

೧೮. ಜಾಗೃತಿ- ಪ್ರಾಯಪ್ಪರ್ವ ಬಾಲಕಿಯರ ಕಾರ್ಯಕ್ರಮ

೧೯. ಸಾಂತ್ವನ- ದೌರ್ಜನಕ್ಕೆ ಒಳಗಾದ ಮಹಿಳೆ ಮಹಿಳೆಯರಿಗೆ ಆರ್ಥಿಕ ನೆರವು ನೀಡುವ ಯೋಜನೆ

೨೦. ಸ್ತ್ರೀಶಕ್ತಿ ಯೋಜನೆ

ಸುಧಾರಣಾ ನಿಲಯಗಳು

೨೧. ಪುರುಷರಿಗೆ ರಾಜ್ಯ ನಿಲಯ ಮತ್ತು ಜಿಲ್ಲಾಶ್ರಯಗಳು

೨೨. ಸಂಸ್ಥೆಗಳಲ್ಲಿರುವವರಿಗೆ ವಿವಾಹ ಯೋಜನೆ

೨೩. ರಾಜ್ಯ ನಿಲಯ ಮತ್ತು ಸ್ವೀಕಾರ ಕೇಂದ್ರಗಳು

೨೪. ಲೋವರ್ ಮತ್ತು ಹೈಯರ್ ಸೆಕೆಂಡರಿ ತರಗತಿಗಳಿಗೆ ಸಂಕ್ಷಿಪ್ತ ಸಾಕ್ಷರತಾ ಶಿಕ್ಷಣ

೨೫. ಪ್ರಮಾಣಿತ ಶಾಲೆ ಮತ್ತು ಪ್ರತಿವೀಕ್ಷಣಾ ಗೃಹಗಳು 26.ಪ್ರಿವೆನ್ಷನ್ ಆಂಡ್ ಕಂಟ್ರೋಲ್ ಆಫ್ ಜುವೆನೈಲ್ ಸೋಷಿಯಲ್ ಮಾಲ್ ಅಡಜುಸ್ಟ್‌ಮೆಂಟ್ ಕೇಂದ್ರ ಪುರಸ್ಕೃತ ಯೋಜನೆ

೨೭. ಪರಿವರ್ತನಾ ಸಂಸ್ಥೆಗಳ ಸುಧಾರಣೆ

೨೮. ಸಾಮಾಜಿಕ ಪಿಡುಗುಗಳ ನಿರ್ಮೂಲನೆಯ ಒತ್ತಾಯಕ್ಕಾಗಿ ವಿಭಾಗ

ಜಿಲ್ಲಾ ವಲಯ ಯೋಜನೆಗಳು

ಶಿಶುಕಲ್ಯಾಣ

1. ಸಮಗ್ರ ಶಿಶು ಅಭಿವೃದ್ಧಿಗಾಗಿ ಕೇಂದ್ರ ಪುರಸ್ಕೃತ ಯೋಜನೆ

2. ನಿರ್ಗತಿಕ ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ಯೋಜನೆ

3. ಅಂಗನವಾಡಿ ಕಾರ್ಯಕರ್ತೆ ಸಹಾಯಕಿಯರಿಗೆ ಹೆಚ್ಚುವರಿ ಗೌರವಧನ

4. ದುಡಿಯುವ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳು

5. ಅಂಗನವಾಡಿ ಕಟ್ಟಡಗಳ ನಿರ್ಮಾಣ

ಮಹಿಳಾಭಿವೃದ್ಧಿ

6. ಮಹಿಳಾ ಮಂಡಳಗಳ ಆರ್ಥಿಕ ನೆರವು

7. ವಿಧವೆಯರ ಮತ್ತು ದೇವದಾಸಿಯರ ವಿವಾಹಕ್ಕೆ ಧನಸಹಾಯ

8. ನಮ್ಮ ಮಗಳು ನಮ್ಮ ಶಕ್ತಿ

ಪೌಷ್ಟಿಕ ಆಹಾರ ಯೋಜನೆ

9. ಶಾಲಾ ಪೂರ್ವ ಮಕ್ಕಳ ಊಟದ ಯೋಜನೆ

10.ವಿಶೇಷ ಘಟಕ ಯೋಜನೆ ಶಾಲಾ ಪೂರ್ವ ಮಕ್ಕಳಿಗೆ ಊಟದ ಯೋಜನೆ

11.ಗಿರಿಜನ ಉಪಯೋಜನೆ.

ಮೋಟಾರು ವಾಹನ ಇಲಾಖೆಯ ಆಧುನೀಕರಣಗೊಳಿಸುವುದು.

4180(4185) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :-- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.